# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1158**
**ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ**
**ಉತ್ತರಿಸಬೇಕಾದ ದಿನಾಂಕ : 18-03-2025**
**ಉತ್ತರಿಸುವ ಸಚಿವರು : ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ಸೇರಿದ ಅಧಿಕಾರಿ/ನೌಕರರಿಂದ ಬೆಳೆಯ ಸಂಗ್ರಹಣಾ ನಷ್ಟಕ್ಕೆ ಬದಲಾಗಿ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿದಿರುವ ಕುರಿತು ಕೈಗೊಂಡಿರುವ ಕ್ರಮಗಳೇನು: | ನಿಗಮದಲ್ಲಿ ದಾಸ್ತಾನು ಮಾಡಲಾದ ಸರಕುಗಳ ಕೊರತೆಯು ಭಾರತ ಸರ್ಕಾರವು ನಿಗಧಿಪಡಿಸಲಾದ Driage % ಪ್ರಮಾಣಕ್ಕಿಂತಲೂ ಹೆಚ್ಚಿನ ಪ್ರಮಾಣದ ಸಂಗ್ರಹಣಾ ನಷ್ಟದ ಮೊತ್ತವನ್ನು ಸಂಬಂಧಿಸಿದ ಏಜೆನ್ಸಿಗಳು ನಿಗಮಕ್ಕೆ ಕಡಿತಗೊಳಿಸುತ್ತಿದ್ದು, ಸದರಿ ಮೊತ್ತವನ್ನು ಕೆ.ಸಿ.ಎಸ್.ಆರ್ ನಿಯಮದಂತೆ ನಿವೃತ್ತ ಸತ್ರ ನ್ಯಾಯಧೀಶರುಗಳಿಂದ ಇಲಾಖಾ ವಿಚಾರಣೆ ನಡೆಸಿ ವಿಚಾರಣಾ ವರದಿಯಂತೆ ಸರ್ಕಾರಕ್ಕೆ ನಷ್ಟವೆಂದು ಪರಿಗಣಿಸಿದ ಅಸ್ವಾಭಾವಿಕ ನಷ್ಟದ ಮೊತ್ತವನ್ನು ಸಂಬಂಧಿಸಿದ ಅಧಿಕಾರಿ / ನೌಕರರಿಂದ ನಿಯಮಾನುಸಾರ ವಸೂಲಾತಿ ಕ್ರಮ ಜರುಗಿಸಲಾಗುತ್ತಿದೆ. |
| ಆ) | ಈ ಸಂಗ್ರಹಣಾ ನಷ್ಟದ ಮೇಲೆ ಶೇಕಡ 8 ರಷ್ಟು ಬಡ್ಡಿಯನ್ನು ವಿಧಿಸಿ ಪಿಎಫ್ ಹಣದಿಂದ ಈ ಹಣವನ್ನು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೆ.ಸಿ.ಎಸ್ (ಸಿಸಿಎ) ನಿಯಮಗಳು 1957ರ ನಿಯಮ 8(iv) ರಂತೆ ಸಂಗ್ರಹಣಾ ನಷ್ಟದ ಮೇಲೆ ಶೇಕಡಾ 8 ರಷ್ಟು ಬಡ್ಡಿಯನ್ನು ವಿಧಿಸಿ ಪಿಎಫ್ ಹಣದಿಂದ ಕಡಿತಗೊಳಿಸಲಾಗಿರುತ್ತದೆ. |
| ಇ) | ಬಂದಿದ್ದಲ್ಲಿ, ನಿವೃತ್ತಿ ಸೌಲಭ್ಯಗಳಿಂದ ವಂಚಿತರಾದ ಈ ಅಧಿಕಾರಿ/ನೌಕರರ ಜೀವನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ. |

**ಸಂಖ್ಯೆ : ಸಇ 27 ರಾಉನಿ 2025**

K. N. Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**